**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 07.08.2023**

**ಪಾಟೀ ಸವಾಲು : ಶ್ರೀ ಆರ್.ವಿ.ಜಿ ವಾದಿ ಪರ ವಕೀಲರಿಂದಃಃ**

ನನ್ನ ಹಾಗೂ ನನ್ನ ಮಕ್ಕಳ ನಡುವೆ ಇಲ್ಲಿಯವರೆವಿಗೂ ವಿಭಾಗಪತ್ರವಾಗಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ಮಕ್ಕಳು ಅನುಕೂಲಗೋಸ್ಕರ ಪ್ರತ್ಯೇಕವಾಗಿ ವಾಸವಾಗಿದ್ದೇವೆ ಎಂದರೆ ಸರಿ. ದಾವಾ ತಪಶೀಲು 1 ರ ಸ್ವತ್ತಿನ ವಿದ್ಯುತ್ ಬಿಲ್ಲು ಯಾರ ಹೆಸರಿನಲ್ಲಿದೆ ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ವಿದ್ಯುತ್ ಸರ್ಪಕವು ಈಗಲೂ ನನ್ನ ಹೆಸರಿನಲ್ಲಿದೆ ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಒಂದು ಸ್ವತ್ತನ್ನು ವರ್ಗಾವಣೆ ಮಾಡಿದಾಗ ವಿದ್ಯುತ್ ಸಂಪರ್ಕವು ಸಹ ಅವರ ಹೆಸರಿಗೆ ಬದಲಾಗುತ್ತದೆ ಎಂದರೆ ಸರಿ. ನಾನಾಗಲೀ, 2 ಮತ್ತು 3 ನೇ ಪ್ರತಿವಾದಿಗಳು ಕೇವಲ ನಾಮಕವಸ್ಥೆಗೆ ಬೇನಾಮಿಯಾಗಿ 4 ನೇ ಪ್ರತಿವಾದಿಗೆ ದಾವಾ 1 ರ ಸ್ವತ್ತನ್ನು ಮಾರಾಟ ಮಾಡಿದ್ದೇವೆ ಹೊರತು ನಿಜವಾಗಿ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಗೆ ಭಾಗಾಂಶದ ಹಕ್ಕನ್ನು ತಪ್ಪಿಸಲು ಕ್ರಯ ಪತ್ರವನ್ನು ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ .

ನಾನು ಮೂಲತಃ ಆಂದ್ರಪ್ರದೇಶ ರಾಜ್ಯದ ಹಿಂದೂಪುರ ತಾಲ್ಲೂಕಿನವರು ಎಂದರೆ ಸರಿ. ಹಿಂದೂಪುರದಲ್ಲಿದ್ದ ಸ್ವತ್ತನ್ನು ನಾನು ಮಾರಾಟ ಮಾಡಿದ್ದೇನೆ ಎಂದರೆ

ಸರಿಯಲ್ಲ. ಗೌರಿಬಿದನೂರು ತಾಲ್ಲೂಕು ಹಾಲಗಾನಹಳ್ಳಿಯಲ್ಲಿ ನನ್ನ ತಂದೆಯ ಹೆಸರಿನಲ್ಲಿದ್ದ ಸ್ವತ್ತನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಗೆ ಭಾಗಾಂಶವನ್ನು ತಪ್ಪಿಸಲು ದಾನಪತ್ರ ಹಾಗೂ ಕ್ರಯಪತ್ರವನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ನಾವು ಸಂಪಾದಿಸಿದ ಒಟ್ಟು ಹಣದಿಂದ ದಾವಾ ಸ್ವತ್ತುಗಳನ್ನು ಪಡೆದಿದ್ದೇವೆ, ಆದುದರಿಂದ ಸದರಿ ಸ್ವತ್ತುಗಳು ನನಗೆ ಸ್ವಯಾರ್ಜಿತ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ನನ್ನ ಮೂವರು ಮಕ್ಕಳು ದುಡಿದ ಹಣದಿಂದ ಸ್ವತ್ತನ್ನು ನನ್ನ ಹೆಸರಿನಲ್ಲಿ ಖರೀದಿಸಲಾಗಿದೆ ಎಂದರೆ ಸರಿಯಲ್ಲ. ನನ್ನ ಮೂವರು ಮಕ್ಕಳು ಪ್ರತ್ಯೇಕವಾದಾಗ ಅವರು ಸಂಪಾದಿಸಿದ ಹಣದಿಂದ ಪ್ರತ್ಯೇಕ ಸ್ವತ್ತುಗಳನ್ನು ಹೊಂದಿದ್ದಾರೆ ಎಂದರೆ ಸರಿ. ವಾದಿಗೆ ಭಾಗಾಂಶ ಕೊಡಬಾರದೆಂದು ಈಗಲೂ ಸಹ ನನ್ನ ಸ್ವಾಧೀನದಲ್ಲಿರುವ ದಾವಾ ಸ್ವತ್ತುಗಳಲ್ಲಿ ವಾದಿಗೆ ಭಾಗಾಂಶ ತಪ್ಪಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ತಪಶೀಲು 1 ರ ಸ್ವತ್ತಿನಲ್ಲಿ 2 ನೇ ಪ್ರತಿವಾದಿಯು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಸ್ವಾಧೀನದಲ್ಲಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2014 ರಿಂದ ಇವತ್ತಿನವರೆಗೂ ಸಹ 2 ನೇ ಪ್ರತಿವಾದಿಯೇ ದಾವಾ ತಪಶೀಲು 1 ರ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಹಾಗೂ 4 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಬಾಡಿಗೆ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಆ ವಿಚಾರ ಗೊತ್ತಿದ್ದರು ವಾದಿಗೆ ಭಾಗಾಂಶ ಕೊಡಬಾರದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2

ಮತ್ತು 3 ನೇ ಪ್ರತಿವಾದಿಗಳು ದಾವಾ ಅನುಸೂಚಿ 1 ರ ಸ್ವತ್ತನ್ನು ಅವರ ಹೆಸರಿಗೆ ಮಾಡಿಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಾನು ಕುಟುಂಬದ ಹಿರಿಯನೆಂದು ನನ್ನ ಹೆಸರಿಗೆ ಕ್ರಯಕ್ಕೆ ಮಾಡಿದ್ದರು ಎಂದು ನುಡಿಯುತ್ತಾರೆ. ನನ್ನ ಮೂವರು ಮಕ್ಕಳು ಸದರಿ ಸ್ವತ್ತನ್ನು ಸಂಪಾದಿಸಿದ ಕಾರಣ ನನ್ನ ಹೆಸರಿನಲ್ಲಿ ಖರೀದಿಸಿದ್ದರು ಎಂದರೆ ಸರಿಯಲ್ಲ. ಆ ಸ್ವತ್ತು ನನ್ನ ಸ್ವಯಾರ್ಜಿತ ಸ್ವತ್ತಲ್ಲ ನನ್ನ ಮಕ್ಕಳೆಲ್ಲರೂ ದುಡಿದ ಹಣದಿಂದ ಖರೀದಿಸಿದ ಸ್ವತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗೆ ಹಕ್ಕಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇದೆ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗೌರಿಬಿದನೂರು